**2ನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು.**

| | | |
|---|---|---|
| ಹೆಸರು | : | ಸುರೇಶ್ ಸಿಂಗ್ |
| ತಂದೆಯ ಹೆಸರು | : | ಸತ್ಯನಾರಾಯಣಸ್ವಾಮಿ |
| ವರ್ಷ | : | 56ವರ್ಷ |
| ಉದ್ಯೋಗ | : | ಪಾನಿಪುರಿ ಅಂಗಡಿ ವ್ಯಾಪಾರ |
| ಸ್ಥಳ | : | ಬೆಂಗಳೂರು |

**ಸಾಕ್ಷಿಯನ್ನು ದಿನಾಂಕ 19.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ- ಆರೋಪಿ ಪರ ವಕೀಲರಿಂದಃ-**

ಪಿರ್ಯಾದಿ ಚಂದ್ರು ಅವರು ಆಗಾಗ ನಮ್ಮ ಅಂಗಡಿಗೆ ಬರುತ್ತಿದ್ದು ಪರಿಚಯವಾಗಿರುತ್ತಾರೆ. ಪಿರ್ಯಾದಿಯ ಸ್ನೇಹಿತರಾದಂತಹ ಹರೀಶ್ ಅವರು ನನ್ನ ಬಳಿ ಬಂದು ಪಿರ್ಯಾದಿಯು ಫೈನಾನ್ಸ್ ಬಿಡುತ್ತಾರೆ ಎಂದು ತಿಳಿಸಿರುತ್ತಾರೆ. ಹರೀಶ್ ಅವರ ಮುಖಾಂತರ ಪಿರ್ಯಾದಿಯು ನನಗೆ ದುಡ್ಡು ಕೊಟ್ಟು ಬೇರೆ 5-6ಜನಗಳಿಗೆ ಕೊಡಿ ಎಂದು ಹೇಳಿರುತ್ತಾರೆ. ಅದರಲ್ಲಿ 3-4ಜನ ಕೈ ಎತ್ತಿರುತ್ತಾರೆ. ಆದರೆ ಪಿರ್ಯಾದಿ ನನ್ನ ಅಂಗಡಿ ಬಳಿ ಬಂದು ಗಲಾಟೆ ಮಾಡುತ್ತಿದ್ದರು. ನನ್ನ ಹೆಂಡತಿ ಮತ್ತು ನನ್ನ ಮಾವ ಅವರು ಯಾವ ಕಾರಣಕ್ಕೆ ಅವರ ಬಳಿ ವ್ಯವಹಾರ ಇಟ್ಟುಕೊಳ್ಳುತ್ತೀರಾ ಮನೆ ಮಾರಿ ದುಡ್ಡು ಕೊಟ್ಟು ಬಿಡಿ ಎಂದು ತಿಳಿಸಿರುತ್ತಾರೆ.

2. ನನ್ನ ಮಾವ ಅವರು ನನ್ನ ಹೆಂಡತಿ ಮೂಲಕ ನನ್ನ ಹೆಸರಿಗೆ ಚೆಕ್ ಅನ್ನು ಕೊಟ್ಟಿರುತ್ತಾರೆ. ಆ ಚೆಕ್ ಅನ್ನು ನನ್ನ ಬ್ಯಾಂಕಿಗೆ ಹಾಕಿಕೊಂಡು ದುಡ್ಡನ್ನು ಡ್ರಾ ಮಾಡಿ ನಾನು, ನನ್ನ ಹೆಂಡತಿ ಮತ್ತು ರವಿಕುಮಾರ್ ಅವರು ಆದಿತ್ಯ ಹೊಟೇಲ್, ಬ್ರಿಗ್ರೇಡ್ ಮಿಲ್ಸ್ ಬಳಿ ಹೋಗಿ ರಾತ್ರಿ ಹಣವನ್ನು ಕೊಟ್ಟು ಬಂದಿರುತ್ತೇವೆ. ಚೆಕ್ ಅನ್ನು ವಾಪಸ್ಸು ಕೊಡಲು ಕೇಳಿದಾಗ ಇವತ್ತು ಕೊಡುತ್ತೇವೆ, ನಾಳೆ ಕೊಡುತ್ತೇವೆ, ಬಡ್ಡಿ ಕೊಡಬೇಕು ಎಂದು ತಿಳಿಸಿರುತ್ತಾರೆ. ಪ್ರಶ್ನಿತ ಚೆಕ್ ಅನ್ನು ನಾನು ಪಿರ್ಯಾದಿಗೆ 5-6ವರ್ಷಗಳ ಹಿಂದೆ ಕೊಟ್ಟಿರುತ್ತೇನೆ. ಹಣವನ್ನು ಪಡೆದಾಗ ಪಿರ್ಯಾದಿಗೆ ನಾನು ಭದ್ರತೆಗಾಗಿ ನನ್ನ ಮತ್ತು ನನ್ನ

ಹೆಂಡತಿಯ ಚೆಕ್‌ಗಳು, ಖಾಲಿ ಆನ್ ಡಿಮಾಂಡ್ ಪ್ರೊನೋಟ್‌ಗೆ ನನ್ನ ಸಹಿ ಮತ್ತು ಹೆಬ್ಬೆಟ್ಟನ್ನು ಹಾಕಿ ಕೊಟ್ಟಿರುತ್ತೇನೆ. ಪಿರ್ಯಾದಿಯು ನನ್ನ ಮೇಲೆ ಈ ಸುಳ್ಳು ಪ್ರಕರಣವನ್ನು ಹಾಕಿರುತ್ತಾರೆ, ಆ ಕಾರಣ ನನ್ನನ್ನು ಈ ಪ್ರಕರಣದಿಂದ ದೋಷಮುಕ್ತನನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಕ್ರಯದ ಕರಾರು ಪತ್ರದ ಆನ್ ಲೈನ್ ಪ್ರತಿಯೊಂದಿಗೆ 65ಬಿ ಸರ್ಟಿಪಿಕೇಟ್ ಅನ್ನು ನೀಡಿದ್ದು ಇದನ್ನು ನಿ.ಡಿ.1 ಎಂದು ಗುರುತಿಸಲಾಯಿಪಿತು.

**ವಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ. ಇ)**

**2ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**